ರಾಜ್ಯದಲ್ಲಿ ನಿರ್ಗತಿಕ ಮಕ್ಕಳ ಅಭಿವೃದ್ಧಿ

1698 (2208) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) - ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿರ್ಗತಿಕ ಮಕ್ಕಳ ಅಭಿವೃದ್ಧಿ ಕುರಿತಂತೆ ಮಹಿಳಾ ಅಭಿವೃದ್ಧಿ ನಿಗಮವು ಹಮ್ಮಿಕೊಂಡ ಕಾರ್ಯಕ್ರಮಗಳೇನು? ಬಾಗಲಕೋಟೆ ಜಿಲ್ಲೆಯಲ್ಲಿರುವ ನಿರ್ಗತಿಕ ಮಕ್ಕಳ ಕುಟೀರಗಳೆಷ್ಟು? ಹಾಗೂ ಎಷ್ಟು ಮಕ್ಕಳು ಇಲ್ಲಿ ಆಶ್ರಯ ಪಡೆದಿದ್ದಾರೆ ;

ಆ) ಸದರಿ ನಿಗಮದಿಂದ ಕೌಶಲ್ಯ ಮತ್ತು ಸ್ವಯಂ ಉದ್ಯೋಗ ತರಬೇತಿ ಅಡಿಯಲ್ಲಿ ಎಷ್ಟು ಗ್ರಾಮೀಣ ಹಾಗೂ ಪಟ್ಟಣ ಮಹಿಳೆಯರಿಗೆ ಅನುಕೂಲತೆ ಒದಗಿಸಲಾಗಿದೆ ; (ಪ್ರತ್ಯೇಕ ವಿವರ ನೀಡುವುದು) ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಕಾರ್ಯಕ್ರಮ ಹಮ್ಮಿ ಕೋರಿರುವುದಿಲ್ಲ. ಬಾಗಲಕೋಟೆಯಲ್ಲಿ ಒಟ್ಟು 12 ನಿರ್ಗತಿಕ ಮಕ್ಕಳ ಕುಟೀರಗಳು ಇದ್ದು, 300 ಮಕ್ಕಳು ಇಲ್ಲಿ ಆಶ್ರಯ ಪಡೆದಿದ್ದಾರೆ.

ಆ) 2002-03ನೇ ಸಾಲಿನಲ್ಲಿ 945 ಮಹಿಳೆಯರ ಕೌಶಲ್ಯ ಮತ್ತು ಸ್ವಯಂ ಉದ್ಯೋಗ ತರಬೇತಿಯಡಿಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಕೂಲ ಪಡೆದಿರುತ್ತಾರೆ.

ಬಾಗಲಕೋಟೆ ನಗರದ ಎತ್ತರದ ಪ್ರದೇಶಗಳಾದ ಕಿಲ್ಲಾ ಮತ್ತು ಜೈನಸೇಟ ಪ್ರದೇಶಗಳ ಸ್ವಾಧೀನ

1699 (2209) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) - ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಬಾಗಲಕೋಟೆ ನಗರದ ಎತ್ತರದ ಪ್ರದೇಶಗಳಾದ ಕಿಲ್ಲಾ ಮತ್ತು ಜೈನಸೇಟ ಪ್ರದೇಶಗಳ ಮನೆಗಳನ್ನು 523ಎಫ್ಆರ್ಎಲ್ ಅಥವಾ 100 ಮೀಟರ್ ದೂರದ ಸೀಮಾ ರೇಖೆಯನ್ನು ಹೊರತುಪಡಿಸಿ, ನಡುಗಡ್ಡೆಯಂತಾಗಲಿರುವ ಕಾರಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಪುನರ್ವಸತಿಗೊಳಿಸಲು ಭರವಸೆ ನೀಡಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆಯೇ ;

ಆ) ಹಾಗಿದ್ದಲ್ಲಿ, ಅದರ ಪ್ರಗತಿ ಏನು ; (ವಿವರ ನೀಡುವುದು) ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಆಲಮಟ್ಟಿ ಜಲಾಶಯದಲ್ಲಿ 519.60 ಮೀಟರ್‌ವರೆಗೆ ಸೆಪ್ಟೆಂಬರ್ 2002 ರಲ್ಲಿ ನೀರು ನಿಲ್ಲಿಸಿದಾಗ ಬಾಗಲಕೋಟೆ ಶಹರದಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಈ ಸಮಸ್ಯೆಗಳನ್ನು ಬಗೆಹರಿಸಲು, ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 124 ಆರ್‌ಇಎಚ್ 2002 ಬೆಂಗಳೂರು ದಿ: 16.11.2002ರಡಿಯಲ್ಲಿ, ವಿಶೇಷ ಪ್ಯಾಕೇಜ್ ಹೊರಡಿಸಿರುತ್ತಾರೆ.

ಈ ಪ್ಯಾಜಕೇಜಿನನ್ವಯ ಬಾಗಲಕೋಟೆ ಪಟ್ಟಣದಲ್ಲಿ, ಆಲಮಟ್ಟಿ ಜಲಾಶಯದ 521 ಮೀಟರ್‌ನಿಂದ 523 ಮೀಟರ್ ಮಧ್ಯದಲ್ಲಿ ಬರುವ ಅಥವಾ ಹಿನ್ನೀರಿನ ಅಂಚಿನಿಂದ 100